


## ಕುತೂಹಲಕಾರಿ

ಡಾ.ಜಿ. ಬಾಲಕೃಷ್ಣ ಅವರ 'ನಿಗೂಢ ನಿಯಾಂಡರ್ತಲ್ ಮಾನವ' ಲೇಖನ (24 ಡಿಸೆಂಬರ್) ಕುತೂಹಲಕರವಾಗಿತ್ತು. ರೋಮಭರಿತ ನಿಯಾಂಡರ್ತಲ್ ಮಾನವ ನಿಜಕ್ಕೂ ರೋಮಾಂಚನ ಉಂಟು ಮಾಡಿದ. ಡಿಸೆಂಬರ್ ಕೊನೆಯ ಸಂಚಿಕೆ ವಿಜ್ಞಾನದ ವಿಶೇಷತೆಯನ್ನು ಹೊತ್ತು ತಂದಿದ್ದು ಸಂತಸಕರ. ಇದು ಹೊಸ ವರ್ಷದ ಕೊಡುಗೆಯೂ ಹೌದು.

-ಅರುಣ ಬಿ.ಕುಲಕರ್ಣಿ, ನರೇಗಲ್ಲ/ ಪಿ. ಗೋವಿಂದರಾಜ್, ಶಿವಮೊಗ್ಗ/ ಡಿ.ಆರ್.ಮಂಜುನಾಥ, ದೇಬೂರು/ ವಿ.ಅರ್ಜುನ್, ಮಂಡ್ಯ

## ಮಾನವ-ಮಾನಿನಿ!

'2 ಕೋಟಿ ಡ್ಯಾನ್ಸ್' 'ಮುಖ'ಪುಟದಲ್ಲಿ ಅನಗತ್ಯವಾಗಿತ್ತು. ಅದೇನು ಹಣವೋ ಡ್ಯಾನ್ಸ್ ಸಂಖ್ಯೆಯೋ ಕೂಡಲೆ ಹೊಳೆಯುವುದಿಲ್ಲ! ಆದರೆ 'ನಿಯಾಂಡರ್ತಲ್ ಮಾನವ'ನಿಗೂ ಮಾನವಿ– ಮಾನಿನಿಗೂ ವೈಷಮ್ಯ ಎದ್ದು ಕಾಣುವಂತಿದೆ!

-ಸಿಪಿಕೆ, ಮೈಸೂರು

## ನಯನ ಮನೋಹರ

'ನಯನ ಮನೋಹರ ಮೀನವಲ್ಲಮ್' ಲೇಖನ ಮಾತ್ರವಲ್ಲ, ಚಿತ್ರಗಳೂ ಸಹ ನಯನ ಮನೋಹರವಾಗಿದ್ದವು.

-ತರಂಗಿಣಿ, ತುಮಕೂರು

## ಸಾರಾ ಕುರಿತ ಲೇಖನ ಸಕಾಲಿಕ

ಅನನ್ಯ ಲೇಖಕಿ ಸಾರಾ ಅಬೂಬಕರ್ ಅವರ ಕುರಿತ ಡಾ. ಸಬಿಹಾ ಭೂಮಿಗೌಡ ಲೇಖನ ಸಕಾಲಿಕವಾಗಿತ್ತು.

-ಎಚ್. ಆನಂದ್ ಕುಮಾರ್, ಚಿತ್ರದುರ್ಗ/ ನರೇಂದ್ರ ಸಿರಕಜೆ, ಮೈಸೂರು/ ರಮಜಾನ ಕೊರ್ತಿ, ಬಾದಾಮಿ, ಕೊಹಿಮ, ಬಸರಕೋಡು

## ವಂಡರ್ ಪುಟದ ದೈತ್ಯ

ಬಸ್–ಕಾರನ್ನು ಮ್ಯಾಗ್ನೆಟ್ ಬಲದಿಂದ ಎಳೆಯುವುದು ನಿಜಕ್ಕೂ ಅದ್ಭುತ! ಮಿಸ್ಟರ್ ಮ್ಯಾಗ್ನೆಟ್ ಈಸ್ ರಿಯಲಿ ವಂಡರ್...!

- ಎಚ್.ಎನ್. ವಿಶ್ವನಾಥ್, ಶಿವಮೊಗ್ಗ

## ಅಬ್ಬಾ.. ನೀಳವೇಣಿ!

ಉದ್ದ ಕೂದಲಿನವರ ಕುರಿತ ಉಮಾ ಅನಂತ್‌ರ ಬರಹ ಮತ್ತು ಚಿತ್ರ ನೋಡಿದಾಗಲೆಲ್ಲ ಮೆಚ್ಚುಗೆಯನ್ನೂ ಮೀರಿ, ಹೇಗೆ ಮೇಂಟೇನ್ ಮಾಡ್ತಾರೋ ಏನೋ ಪಾಪ ಎನ್ನಿಸುವುದೇ ಹೆಚ್ಚು.

-ರೇಷ್ಮಾ. ಎ.ಎಸ್., ಬಾಳೆಹೊನ್ನೂರು

## ಚಿಂತನೆಗೆ ಗ್ರಾಸ

ಸಂತಾನಹೀನತೆ ಆರೋಗ್ಯ ಲೇಖನ ಚಿಂತನೆಗೆ ಅನುವು ಮಾಡಿಕೊಟ್ಟಿತು. ಸಂತಾನವಿಲ್ಲದ ದಂಪತಿಗಳ ಸಂಕಟ ಹೇಳತೀರದು. ಈ ಬಗ್ಗೆ ಆರೋಗ್ಯ ಇಲಾಖೆ ಮತ್ತಷ್ಟು ಕಾರ್ಯೋನ್ಮುಖವಾಗಬೇಕು.

-ಎ.ಕೆ. ಪಟ್ಟಾಭಿ, ಬೆಂಗಳೂರು

### ಮಹಿಳಾ ಸಾಧಕಿಯ ಮಾಹಿತಿ ಕೋರಿಕೆ

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯವು 'ನಮ್ಮ ಮಹಿಳೆ ನಮ್ಮ ಹೆಮ್ಮೆ' ಗ್ರಂಥ ಪ್ರಕಟಣೆ ಯೋಜನೆ ಹಮ್ಮಿಕೊಂಡಿದೆ. ಧಾರ್ಮಿಕ, ಸಾಮಾಜಿಕ, ರಾಜಕೀಯ, ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರು ತಮ್ಮ ಸಾಧನೆಗಳ ಬಗೆಗೆ ವಿವರವಾದ ಮಾಹಿತಿಯನ್ನು ಭಾವಚಿತ್ರ ಸಮೇತ ಕಳುಹಿಸಿಕೊಡಬೇಕೆಂದು ಮನವಿ ಮಾಡಿಕೊಳ್ಳಲಾಗಿದೆ.

ಅಲ್ಲದೆ, ಇಂತಹ ಸಾಧಕಿಯರ ಬಗೆಗೆ ಮಾಹಿತಿಯುಳ್ಳವರು ಅವರ ಬಗೆಗಿನ ವಿವರಗಳನ್ನು ಡಾ.ವಿಜಯದೇವಿ, ಪ್ರಧಾನ ಸಂಪಾದಕರು, ನಮ್ಮ ಮಹಿಳೆ ನಮ್ಮ ಹೆಮ್ಮೆ ಯೋಜನೆ, ಕನ್ನಡ ವಿಭಾಗ, ಮಹಿಳಾ ವಿಶ್ವ ವಿದ್ಯಾಲಯ, ವಿಜಾಪುರಕ್ಕೆ ಕಳುಹಿಸಬಹುದು. ಹೆಚ್ಚಿನ ಮಾಹಿತಿಗೆ ಜಂಗಮ ದೂರವಾಣಿ: 94489 39490 ಸಂಪರ್ಕಿಸಬಹುದು.


